# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ/171/2019/ಎ.ಆರ್.ಇ-10

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 28/04/2022.

## ವಿಚಾರಣಾ ವರದಿ

**ಉಪಸ್ಥಿತರು:** **ಜಿ. ನಂಜುಂಡಯ್ಯ,**
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಆಪಾದಿತ ಸರ್ಕಾರಿ ನೌಕರ ಶ್ರೀ **ಕಾಂತರಾಜು,** ಹಿಂದಿನ ಕಾರ್ಯದರ್ಶಿ, ಆಲಂಬಾಡಿ ಕವಲು ಗ್ರಾಮ ಪಂಚಾಯತಿ, ಕೆ.ಆರ್. ಪೇಟೆ ತಾಲ್ಲೂಕು ಮಂಡ್ಯ ಜಿಲ್ಲೆ ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:** 1. ಕಂಪ್ಲೆಂಟ್/ಉಪಲೋಕ್/ಎಂವೈಎಸ್-301/2007/ ಎಆರ್‌ಎಲ್‌ಓ-5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 25/04/2019.

2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/251/ಗ್ರಾಪಂಕಾ/2019, ಬೆಂಗಳೂರು, ದಿನಾಂಕ: 11/06/2019.

3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/171/2019, ಬೆಂಗಳೂರು ದಿನಾಂಕ: 20/06/2019.

* * * *

1. ಈ ದೂರನ್ನು, **ದೂರುದಾರರಾದ** ಶ್ರೀ **ಜಿ.ಎಸ್. ಕರೀಗೌಡ,** ಆಲಂಬಾಡಿ ಕವಲು ಗ್ರಾಮ, ಕೆ.ಆರ್. ಪೇಟೆ ತಾಲ್ಲೂಕು, ಮಂಡಯ್ಯ ಜಿಲ್ಲೆ ರವರು ಲೋಕಾಯುಕ್ತ ಸಂಸ್ಥೆಗೆ (1) ಶ್ರೀ **ಪಿ. ಸಿದ್ದೇಗೌಡ,** ಅಧ್ಯಕ್ಷರು (2) ಕಾರ್ಯದರ್ಶಿ (3) ಶ್ರೀ **ಬಿ.ಕೆ. ನಾಗರಾಜು,** ಕಾರ್ಯದರ್ಶಿ (4) ಶ್ರೀ **ಕಾಂತರಾಜು,** ಹಿಂದಿನ ಕಾರ್ಯದರ್ಶಿ ಮತ್ತು (5) ಶ್ರೀ **ಹೆಚ್. ಕೇಶವಮೂರ್ತಿ,** ಹಿಂದಿನ ಕಾರ್ಯದರ್ಶಿ, ಆಲಂಬಾಡಿ ಕವಲು

ಗ್ರಾಮ ಪಂಚಾಯತಿ, ಕೆ.ಆರ್. ಪೇಟೆ ತಾಲ್ಲೂಕು ರವರುಗಳ ವಿರುದ್ಧ ಗ್ರಾಮಪಂಚಾಯತಿಯಲ್ಲಿ ಈ ಕೆಳಕಂಡ ನ್ಯೂನತೆಗಳ ಬಗ್ಗೆ ದೂರನ್ನು ಸಲ್ಲಿಸಿದ್ದು, (ಅ) ಸೀಮೆ ಎಣ್ಣೆ ಮೋಟಾರು ಖರೀದಿ ಹಾಗೂ ಖರೀತಿಯಲ್ಲಿ ನ್ಯೂನತೆಗಳು (ಆ) ಶ್ರೀಮತಿ ಪೂರ್ಣಿಮ ಗಂಡ ವಿಷಕಂಠಮೂರ್ತಿ ರವರ ಜಮೀನಿನ ಸಮತಟ್ಟು ಅವ್ಯವಹಾರ ನಡೆದ ಬಗ್ಗೆ (ಇ) ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಮನೆ ಕಟ್ಟದೆ ಬಿಲ್ ಪಾವತಿಸಿರುವುದು (ಈ) ಕೂಲಿಗಾಗಿ ಕಾಳು ಯೋಜನೆಯಲ್ಲಿ ಅಕ್ಕಿ ದುರುಪಯೋಗಪಡಿಸಿಕೊಂಡ ಬಗ್ಗೆ (ಉ) ಅಭಿವೃದ್ಧಿ ಹಣವನ್ನು ಬಿಲ್ ಇಲ್ಲದೆ ದುರುಪಯೋಗಪಡಿಸಿಕೊಂಡ ಬಗ್ಗೆ ಗ್ರಾಮ ಪಂಚಾಯತಿ ಕಛೇರಿಗೆ ದೂರು ಸಲ್ಲಿಸಿದ್ದು, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿಯವರು ವಿಚಾರಣೆ ಕೈಗೊಂಡಿದ್ದರೂ ಸಹ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಆದ್ದರಿಂದ, ಲೋಕಾಯುಕ್ತ ಕಛೇರಿಗೆ ದೂರು ಸಲ್ಲಿಸಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ: 11/06/2019 ರಂದು, ಮಾನ್ಯ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ಸರ್ಕಾರಿ ಆದೇಶವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತರವರು ದಿನಾಂಕ: 20/06/2019 ರಂದು ಅಪರ ನಿಬಂಧಕರು, ವಿಚಾರಣೆಗಳು-10 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸಲು ಆದೇಶಿಸಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ **ಶ್ರೀ ಕಾಂತರಾಜು,** ಹಿಂದಿನ ಕಾರ್ಯದರ್ಶಿ, ಆಲಂಬಾಡಿ ಕವಲು ಗ್ರಾಮ ಪಂಚಾಯತಿ, ಕೆ.ಆರ್. ಪೇಟೆ ತಾಲ್ಲೂಕು ಮಂಡ್ಯ ಜಿಲ್ಲೆ ರವರ ವಿರುದ್ಧ ದೋಷಾರೋಪಣೆ (Articles of Charge) ಅನ್ನು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ

ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 09/08/2019 ರಂದು **ಈ ಕೆಳಕಂಡಂತೆ** ಕಳುಹಿಸಲಾಗಿರುತ್ತದೆ.

ANNEXURE NO. 1

CHARGE

That, you **Sri Kantharaju,** the then Secretary, Alambadi Kavalu Village, K.R. Pet Taluk, Mandya District, has committed following dereliction of duty/misconduct:-

(i) "You DGO on 1/9/2006, three motors were purchased from Sri Lakshmi Venkatshwara Electricals and Hardwares for a sum of Rs.40,800/-, without approval of quotations from purchase committee. The motors were not taken to stock. The amount was drawn through self cheque and cash was paid to M/s. Sri Lakshmi Venkatshwara Electricals and Hardwares. "

(ii) "The work was taken up for leveling land of Poornima W/o Vishakanta Murthy, under the scheme of development for Rs.15,415/-, an estimate was prepared for Rs.15,415/- and one AS Paramcsha, the contractor had taken up

the work. The contract certificate produced by you does not bear the date and the payment bill does not bear the signature of President of the Gram Panchayath. The MB produced does not find the check measurement by AEE"

Thus, you DGO being Government/public servant has failed to maintain absolute integrity besides devotion to duty and acted in a manner unbecoming of Government servant and thus committed misconduct as enumerated U/R 3(1) of Karnataka Civil Service (Conduct) Rules 1966.

**ANNEXURE NO.II**
**STATEMENT OF IMPUTATIONS OF MISCONDUCT**

1. The complainant Sri G.S.Karigowda, S/o Susegowda, Alambadi Kavalu Village, K.R.Pet Taluk, Mandya District, has filed this complaint against (1) Sri P.Siddegowda, President (2) Secretary, (3) Sri B.K.Nagaraju, Secretary, (4) Sri Kantharaju, the then Secretary, and (5) Sri H.Keshavamurthy, the then Secretary of Alambadi Kavalu Gram Panchayath, KR Pet Taluk, and the same is taken up for investigation u/s 9 of the Karnataka Lokayukta Act, 1984.

2. In the complaint, it is stated that the President Sri P.Siddegowda and Secretary of Alambadi Kavalu Gram

Panchayath, KR Pet Taluk, have committed irregularities in respect of following transactions of the Gram Panchayath.

i) Purchase and distribution of kerosene oil motor pump.
ii) The leveling of the land of Smt.Purnima W/o Vishakantamurthy;
iii) Passing of bills without construction of houses;
iv) Misappropriation of rice released under SGRY scheme;
v) Use of development funds without passing bills; etc.

3. It is further stated that the Executive Officer of Taluk Panchayath has conducted enquiry, but no action has been taken against the President and Secretary. Hence, complainant prayed to take action against the respondents.

4. Along with complaint, complainant has produced the inspection report dt.15.2.2007 and a letter bearing No. TPS/CR.19/2006-07 dt.28.6.2006.

5. As per the Report dated 28/6/2006 of Taluk Executive Officer, Taluk Panchayath, K.R.Pet, no vouchers were available for the development grant of Rs.5,00,000/-.

6. On 1/9/2006, three motors were purchased from Sri Lakshmi Venkatshwara Electricals and Hardwares for a sum of Rs.40,800/-, without approval of quotations from purchase committee. The motors were not taken to stock. The amount was drawn through

self cheque and cash was paid to M/s. Sri Lakshmi Venkatshwara Electricals and Hardwares. During the above period one Sri **Kantharaju** was working as Secretary and Sri Siddegowda was working as President of Alambadi Kaval Grama Panchayath.

7. Respondent No.4 Sri Kantharaju filed his comments dt.11.12.2018 and denied the allegations made against him and further stated that kerosene motors were purchased from Sri Venkateshwara Electricals and Hardware, by calling the rate list and selecting lowest quoted price. Further, he stated that in respect of leveling land of Poornima W/o Vishakanta Murthy, the Asst. Engineer has looked after the work and written MB and accordingly bill is passed. Hence he prayed to dismiss the complaint.

8. The CEO,ZP, Mandya, submitted report dt.15.12.2018 alongwith copy of the order passed in DS:C4:CCA.5/06-07 dt.28.12.2013 passed by CEO and the Disciplinary Authority, wherein it is stated that on the basis of the report submitted by Executive Officer, Taluk Panchayath dt.28.1.2008, departmental enquiry was conducted against Respondent No.3 and the Enquiry Officer submitted report dt.30.5.2012 stating that the allegations made in the report dt.28.1.2008 are proved and thereafter, vide order dt. 28.12.2013, an amount of Rs.46,149/- was ordered to be recovered from the retirement benefits i.e. DCRG and EL Encashment of Respondent No.3. As enquiry against R.3 is already

conducted on the above said allegations and final order has been passed, no further action could be taken against R.3 on the same allegations.

9. In respect of the allegations against Respondent No.4 i.e. DGO, R.4 has produced the credit bill for purchase of 3 kerosene motors. But the said credit bill does not bear the bill number and date and also the signature of authorized dealer. But, it is shown that 3 kerosene motors are purchased for Rs.13,600/- each, totally costing Rs.40,800/-. Respondent No.4 has produced cash receipts dt.1.9.2006, but the same does not bear the KST number.

10. R.4/DGO has produced the quotations of Laxmi Venkateshwara Electricals, Hitesh Electricals and Hardware, Rajan Electricals, who have quoted the rate of one kerosene motor as Rs.13,600/-, 13,975/- and Rs.13,900/-respectively. The lowest rate quoted is Rs.13,600/- by Sri Laxmi Venkateshwara Electricals, but the quotation does not bear the signature of authorized dealer.

11. R.4/DGO has also not produced the copy of the stock register. But the copy showing distribution of the kerosene motors is produced. R.4 has stated that he has paid the amount of R.40,800/- to the Sri Laxmi Venkateshwara Electricals by cash, which is not permissible. R.4 ought to have paid the amount through cheque. Thus R.4 has committed dereliction of duty and misconduct in purchase and distribution of kerosene motors.

12. Work was taken up for leveling land of Poornima W/o Vishakanta Murthy, under the scheme of development for Rs.15,415/-, an estimate was prepared for Rs.15,415/- and one AS Paramesha, the contractor had taken up the work. The contract certificate produced by R.4 does not bear the date and the payment bill does not bear the signature of President of the Gram Panchayath. The MB produced does not find the check measurement by AEE.

12. Since, said facts and material on record prima-facie show that the respondents-4 has committed misconduct, as per Rule 3 (1) of the K.C.S. (Conduct) Rules, 1966, now, acting under Section 12(3) of the Karnataka Lokayukta Act, recommendation is made to the Competent Authority to initiate disciplinary proceedings against the DGO 4 and to entrust the inquiry to this Authority under Rule 14-A of Karnataka Civil Services (Classification, Control and Appeals) Rules, 1957.

13. In turn, the Competent Authority initiated disciplinary proceedings against the DGO and entrusted the enquiry to this Institution and Hon'ble Upalokayukta nominated this enquiry Authority to conduct enquiry and to submit a report. **Hence, the above satated charge.**

**4.** ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ 13/08/2019 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ-11(9)

ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5. ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಆ.ಸ.ನೌ ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ದಿನಾಂಕ 13/08/2019 ರಂದು ಸಲ್ಲಿಸಿ, ದೋಷಾರೋಪಣೆಯಲ್ಲಿ ಮಾಡಿರುವ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದು, 2006-07ನೇ ಸಾಲಿನ ಅಭಿವೃದ್ಧಿ ಅನುದಾನದ ಕ್ರಿಯಾಯೋಜನೆಯ ಶೇಕಡ20 ರ ಫಲಾನುಭವಿಗಳಿಗೆ ವಿತರಿಸಲು ಶ್ರೀ ಲಕ್ಷ್ಮೀ ವೆಂಕಟೇಶ್ವರ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್, ಕೆ.ಆರ್. ಪೇಟೆ ಇವರಿಂದ 03 ಸೀಮೆ ಎಣ್ಣೆ ಮೋಟಾರ್‌ಗಳನ್ನು ಖರೀದಿಸಲಾಗಿದ್ದು ಸದರಿ ಸಂಸ್ಥೆಯವರಿಗೆ ನಗದು ರೂಪದಲ್ಲಿ ಹಣವನ್ನು ಪಾವತಿಸಿದ್ದು, ಹಣ ಪಡೆದ ನಂತರ ಕ್ಯಾಷ್ ರಿಸಿಪ್ಟ್‌ನ್ನು ಸಲ್ಲಿಸಿರುವುದಾಗಿ, ಆದ್ದರಿಂದ ಮೋಟಾರ್ ಖರೀದಿ ಮಾಡಿದ ಬಾಬ್ತು ಸಂಬಂಧಿಸಿದ ಸಂಸ್ಥೆಯವರಿಗೆ ತಾನು ಮೊತ್ತವನ್ನು ಪಾವತಿಸಿರುವುದಾಗಿಇದರಲ್ಲಿ ಯಾವುದೇ ಹಣ ದುರುಪಯೋಗ ಮಾಡಿರುವುದಿಲ್ಲವೆಂದು ಆದ್ದರಿಂದ ಸದರಿಯವನ್ನು ಆರೋಪದಿಂದ ಮುಕ್ತಗೊಳಿಸಬೇಕಾಗಿ ಕೋರಿರುತ್ತಾರೆ.

7. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ **ಶ್ರೀ ಜಿ.ಎಸ್. ಕರಿಗೌಡ** ರವರನ್ನು ಪಿ.ಡಬ್ಲ್ಯೂ.1 ಎಂದು, ಸಾಕ್ಷ್ಯ ನುಡಿಸಿಕೊಂಡು ನಿ.ಪಿ.-1 ರಿಂದ 6 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 10/03/2022 ರಂದು ಪಡೆದುಕೊಳ್ಳಲಾಗಿರುತ್ತದೆ.

8. ಆಪಾದಿತ ಸರ್ಕಾರಿ ನೌಕರ **ಶ್ರೀ ಕಾಂತರಾಜು** ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ-1** ಎಂದು ವಿಚಾರಣೆ ಮಾಡಿಕೊಂಡು ಒಟ್ಟು 15 ದಾಖಲಾತಿಗಳನ್ನು ನಿ.ಡಿ-1 ರಿಂದ 15 ಎಂದು ಗುರುತಿಸಿಕೊಂಡಿರುತ್ತಾರೆ.

9. ಉಭಯ ಪಕ್ಷದವರ ಪರವಾಗಿ ಮಂಡನಾಧಿಕಾರಿಗಳ ವಾದ ವಿವಾದವನ್ನು ಮತ್ತು ಆ.ಸ.ನೌ ರವರ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

10. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ-1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತು ಪಡಿಸಿದೆಯೇ?

**ಅಂಶ-2:** ಆದೇಶವೇನು?

11. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕರಾತ್ಮಕವಾಗಿ**

**ಅಂಶ 2: ಅಂತಿಮ ಆದೇಶದಂತೆ**

**<u>ಕಾರಣಗಳು:</u>**

13. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ **ಶ್ರೀ ಜಿ.ಎಸ್. ಕರಿಗೌಡ**

ರವರನ್ನು ಪಿ.ಡಬ್ಲ್ಯೂ.1 ಎಂದು, ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.–1** ರಿಂದ **6** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

14. **ದೂರುದಾರ ಶ್ರೀ ಜಿ.ಎಸ್. ಕರಿಗೌಡ ಪಿ.ಡಬ್ಲ್ಯೂ–1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ,** 2007 ಏಪ್ರೀಲ್ ತಿಂಗಳಿನಲ್ಲಿ ತಾನು ಕೆ.ಆರ್.ಪೇಟೆ ತಾಲ್ಲೂಕಿನ ಅಲಂಬಾಡಿ ಕಾವಲು ಗ್ರಾಮ ಪಂಚಾಯತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯ ಮೇಲೆ ಲೋಕಾಯುಕ್ತ ಸಂಸ್ಥೆಗೆ ದೂರನ್ನು ನೀಡಿದ್ದು, ಆ.ಸ.ನೌಕರರು ಸದರಿ ಪಂಚಾಯತಿಯಲ್ಲಿ ಕೆಲಸ ಮಾಡಿರುತ್ತಾರೆ. ಆನಂತರ ಶ್ರೀ ಕೇಶವಮೂರ್ತಿ ಹಾಗೂ ಶ್ರೀ ನಾಗರಾಜು ಎನ್ನುವವರು ಸಹ ಕರ್ತವ್ಯ ನಿರ್ವಹಿಸಿರುತ್ತಾರೆ. ಈ ಕೆಳಕಂಡ ಕಾಮಗಾರಿಗಳ ನ್ಯೂನತೆಯ ಕುರಿತು ತಾನು ದೂರು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

ಅ) ಸೀಮೆ ಎಣ್ಣೆ ಮೋಟಾರು ಖರೀದಿ ಹಾಗೂ ವಿತರಣೆಯಲ್ಲಿನ ನ್ಯೂನತೆಗಳು.

ಆ) ಶ್ರೀಮತಿ ಪೂರ್ಣಿಮ ಗಂಡ ವಿಷಕಂಠಮೂರ್ತಿ ರವರ ಜಮೀನಿನ ಸಮತಟ್ಟು ಕಾಮಗಾರಿ ಅವ್ಯವಹಾರ ನಡೆದ ಬಗ್ಗೆ.

ಇ) ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಮನೆ ಕಟ್ಟದೆ ಬಿಲ್ ಪಾವತಿಸಿರುವುದು.

ಈ) ಕೂಲಿಗಾಗಿ ಕಾಳು ಯೋಜನೆಯಲ್ಲಿ ಅಕ್ಕಿ ದುರುಪಯೋಗಪಡಿಸಿಕೊಂಡ ಬಗ್ಗೆ.

ಉ) ಅಭಿವೃದ್ದಿ ಹಣವನ್ನು ಬಿಲ್ ಇಲ್ಲದೆ ದುರುಪಯೋಗಪಡಿಸಿಕೊಂಡ ಬಗ್ಗೆ.

15. **ದೂರುದಾರ ಶ್ರೀ ಜಿ.ಎಸ್. ಕರಿಗೌಡ ಪಿ.ಡಬ್ಲ್ಯೂ–1** ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಮೇಲ್ಕಂಡ ಎಲ್ಲಾ ಅವ್ಯವಹಾರಗಳು ಸದರಿ ಮೇಲ್ಕಂಡ ಗ್ರಾಮ ಪಂಚಾಯತಿಯಲ್ಲಿ ನಡೆದ ಬಗ್ಗೆ ತನಿಖೆ ಮಾಡುವಂತೆ ಈ ಮುಂಚೆ ತಾಲ್ಲೂಕು ಪಂಚಾಯತಿ ಕಛೇರಿಗೆ ದೂರು ಸಲ್ಲಿಸಿದ್ದು, ಅವರು ಯಾವ ಕ್ರಮ ತೆಗೆದುಕೊಂಡರೆಂದು ತಿಳಿದುಬರಲಿಲ್ಲ. ಆದ ಕಾರಣ ತಾನು ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿರುವುದಾಗಿ, ತನ್ನ ದೂರು ಹಾಗೂ ಪ್ರಪತ್ರ–1 ಮತ್ತು 2 ನ್ನು ಸಲ್ಲಿಸಿದ್ದು, ಅವುಗಳನ್ನು ಕ್ರಮವಾಗಿ **ನಿ.ಪಿ–1 ರಿಂದ 3** ಎಂದು ಗುರುತಿಸಲಾಯಿತು ಹಾಗೂ ಸದರಿ ದೂರಿನೊಂದಿಗೆ ತಾನು, ತಾಲ್ಲೂಕುಪಂಚಾಯತಿ ಕೆ.ಆರ್.ಪೇಟೆಯವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಮಂಡ್ಯ ಇವರಿಗೆ ಬರೆದ ಪತ್ರ ಹಾಗೂ ಅಲಂಬಾಡಿ ಕಾವಲ್ ಗ್ರಾಮ ಪಂಚಾಯತಿ

ಕಛೇರಿಯ ಪರಿವೀಕ್ಷಣಾ ವರದಿ ದಾಖಲೆಗಳನ್ನು ಸಲ್ಲಿಸಿದ್ದು(ಒಟ್ಟು 3 ಪುಟಗಳು), ಇವುಗಳನ್ನು ಒಟ್ಟಾಗಿ ನಿ.ಪಿ–4 ಎಂದು ಗುರುತಿಸಲಾಯಿತು.

16. **ದೂರುದಾರ ಶ್ರೀ ಜಿ.ಎಸ್. ಕರಿಗೌಡ ಪಿ.ಡಬ್ಲ್ಯೂ–1** ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಲೋಕಾಯುಕ್ತ ಸಂಸ್ಥೆಗೆ ತಾನು ಆಗಸ್ಟ್ 2007ರಲ್ಲಿ ನನ್ನ ಪ್ರತ್ಯುತ್ತರವನ್ನು ನೀಡಿದ್ದು ಅದು ನಿ.ಪಿ–5 ಎಂದು, ಸದರಿ ನಿ.ಪಿ–5ರೊಂದಿಗೆ ಸಾಕ್ಷಿ ನೀಡಿದ ದಾಖಲಾತಿ ಪುಟ ಸಂಖ್ಯೆ: 39 ಮತ್ತು 40 ಹರಿದಿದ್ದು, ಆ ಬಗ್ಗೆ ಷರಾ ಕಂಡುಬಂದಿರುತ್ತದೆ. ಸದರಿ ದಾಖಲಾತಿಯನ್ನು **ನಿ.ಪಿ–6(ಹರಿದ 2 ಪುಟಗಳು)** ಎಂದು ಗುರುತಿಸಲಾಯಿತು.

17. ಆಪಾದಿತ ಸರ್ಕಾರಿ ನೌಕರ **ಶ್ರೀ ಕಾಂತರಾಜು** ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.–1** ಎಂದು ಸಾಕ್ಷ್ಯ ನುಡಿದಿದ್ದು ನಿ.ಡಿ–1 ರಿಂದ 15 ದಾಖಲಾತಿಯನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತಾನು ಆಲಂಬಾಡಿ ಕಾವಲ್ ಗ್ರಾಮ ಪಂಚಾಯತಿ ಪ್ರಭಾರ ಕಾರ್ಯದರ್ಶಿಯಾಗಿ ದಿನಾಂಕ 05/10/2006 ರವರೆಗೆ ಕರ್ತವ್ಯ ನಿರ್ವಹಿಸಿದ್ದು 3 ಸೀಮೆ ಎಣ್ಣೆ ಮೋಟಾರ್‌ಗಳನ್ನು ಖರೀದಿಸಲು ದರಪಟ್ಟಿಯನ್ನು ಆಹ್ವಾನಿಸಿ ಕನಿಷ್ಟ ದರ ನಮೂದಿಸಿದಂತಹ ಶ್ರೀ ಲಕ್ಷ್ಮೀ ವೆಂಕಟೇಶ್ವ ಎಲೆಕ್ಟ್ರಿಕಲ್ಸ್ ಅಂಡ್ ಹಾರ್ಡ್‌ವೇರ್, ಕೆ.ಆರ್. ಪೇಟೆ ಇವರಿಮದ ಖರೀದಿಸಿದ್ದು, ಇದಕ್ಕೆ ಸಂಬಂಧಿಸಿದಂತೆ 3 ದರಪಟ್ಟಿ ಪ್ರತಿಗಳನ್ನು ಹಾಜರ್‌ಪಡಿಸಿದ್ದು, ಸದರಿ ಶ್ರೀ ಲಕ್ಷ್ಮೀ ವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ಅಂಡ್ ಹಾರ್ಡ್‌ವೇರ್ ರವರಿಗೆ ನಗದು ರೂಪದಲ್ಲಿ ತಾನು ಹಣ ಪಾವತಿಸಿರುವುದಾಗಿ ಸದರಿಯವರು ನೀಡಿರುವ ಕ್ರೇಡಿಟ್ ಬಿಲ್ ಹಾಗೂ ನಗದು ರಶೀದಿಯನ್ನು ನೀಡಿರುವುದಾಗಿ ಅದನ್ನು ಕೂಡ ಹಾಜರ್‌ಪಡಿಸಿರುವುದಾಗಿ, ಆ ರೀತಿ ಖರೀದಿಸಿದ್ 3 ಸೀಮೆ ಎಣ್ಣೆ ಮೋಟಾರುಗಳನ್ನು ದಿನಾಂಕ 10/08/2006 ರ ಸಾಮಾನ್ಯ ಸಭೆ ವಿಷಯ ಸೂಚಿ 4 ರಲ್ಲಿ ಅನುಮೋದನೆ ಪಡೆದಿರುವ ಫಲಾನುಭವಿಗಳಿಗೆ ವಿತರಿಸಲಾಗಿರುವುದಾಗಿ ತಾವು ಹಣ ದುರುಪಯೋಗ ಮತ್ತು ಕರ್ತವ್ಯ ಲೋಪವೆಸಗಿರುವುದಿಲ್ಲವೆಂದು ತಮ್ಮ ಲಿಖಿತವಾದವನ್ನು ಸಲ್ಲಿಸಿರುತ್ತಾರೆ.

18. ಆಪಾದಿತ ಸರ್ಕಾರಿ ನೌಕರ/ಡಿಡಬ್ಲ್ಯೂ-1 ರವರನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಪಾಟೀ ಸವಾಲು ಮಾಡಲಾಗಿ ಈ ಕೆಳಕಂಡಂತೆ ಒಪ್ಪಿಕೊಂಡಿರುತ್ತಾರೆ.

> "ಸದರಿ ದೂರಿನ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಕೆ.ಆರ್. ಪೇಟೆ ಇವರು ತನಿಖೆ ಮಾಡಿ ನಿ.ಪಿ-4 ರಂತೆ ವರದಿ ನೀಡಿರುತ್ತಾರೆ ಎಂದರೆ, ಸರಿ".
>
> "ಸದರಿ ವರದಿಯಲ್ಲಿ 5 ಲಕ್ಷ ರೂಪಾಯಿ ಅಭಿವೃದ್ಧಿ ಕಾಮಗಾರಿಗೆ ಯಾವುದೇ ವೋಚರ್ ಇರುವುದಿಲ್ಲ ಎಂದರೆ, ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ".
>
> "ದಿನಾಂಕ: 01-09-2006 ರಂದು 3 ಸೀಮೆಎಣ್ಣೆ ಮೋಟಾರುಗಳನ್ನು ಲಕ್ಷ್ಮೀ ವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ಅಂಡ್ ಹಾರ್ಡ್‌ವೇರ್ ರವರಿಂದ ರೂ.40,800/- ಗಳಿಗೆ ಖರೀದಿಸಿರುತ್ತೇನೆ ಎಂದರೆ, ಸರಿ. ಸದರಿ 3 ಮೋಟಾರುಗಳನ್ನು ಪರ್ಚೇಸ್ ಕಮೀಟಿ ಯವರಿಂದ ಕೊಟೇಷನ್‌ಗಳ ಅನುಮೋದನೆ ಪಡೆಯದೇ ಖರೀದಿ ಮಾಡಿರುತ್ತೇನೆ ಎಂದರೆ, ಸರಿಯಲ್ಲ. ಸಾಕ್ಷಿ ಮುಂದುವರೆದು, ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದಿರುತ್ತೇನೆ. ಸದರಿ ಮೋಟಾರುಗಳನ್ನು ಖರೀದಿ ಮಾಡಿದ ನಂತರ ದಾಸ್ತಾನು ವಹಿಗೆ ಎಂಟ್ರಿ ಮಾಡಿರಲಿಲ್ಲ ಎಂದರೆ, ಸರಿಯಲ್ಲ. ಸದರಿ ರೂ.40,800/- ಹಣವನ್ನು ಸೆಲ್ಫ್ ಚೆಕ್ ಮೂಲಕ ಪಡೆದು, ನಗದು ಹಣವನ್ನು ಮೆ॥ ಲಕ್ಷ್ಮೀವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ಅಂಡ್ ಹಾರ್ಡ್‌ವೇರ್ ರವರಿಗೆ ಸಂದಾಯ ಮಾಡಿರುತ್ತೇನೆ ಎಂದರೆ, ನಿಜ. ಸದರಿ ಹಣವನ್ನು ಸೆಲ್ಫ್ ಚೆಕ್ ಮೂಲಕ ಪಡೆದು, ಮೆ॥ ಲಕ್ಷ್ಮೀವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ಅಂಡ್ ಹಾರ್ಡ್‌ವೇರ್ ರವರಿಗೆ ನಗದು ರೂಪದಲ್ಲಿ ಸಂದಾಯ ಮಾಡಲು ನನಗೆ ಅಧಿಕಾರ ಇರಲಿಲ್ಲ ಎಂದರೆ, ಅಧ್ಯಕ್ಷರ ಒತ್ತಡಕ್ಕೆ ಹಾಗೂ ಕೆಲಸದ ಒತ್ತಡದಿಂದ ಲೋಪ ಆಗಿರುತ್ತದೆ".
>
> " ಪೂರ್ಣಿಮ ಗಂಡ ವಿಷಕಂಠಮೂರ್ತಿ ಇವರ ಜಮೀನು ಸಮತಟ್ಟು ಮಾಡುವ ಕೆಲಸಕ್ಕೆ ರೂ.15,415/- ಗಳ ಅಂದಾಜು ಆಗಿದ್ದು, ಶ್ರೀ ಎ.ಎಸ್. ಪರಮೇಶ್ವರ ಎನ್ನುವವರು ಕೆಲಸವನ್ನು ಮಾಡಿದ್ದು, ಕಾಂಟ್ರ್ಯಾಕ್ಟ್ ಸರ್ಟಿಫಿಕೇಟ್ ನಲ್ಲಿ ದಿನಾಂಕ ನಮೂದಿಸಿರುವುದಿಲ್ಲ ಹಾಗೂ ಪೇಮೆಂಟ್ ಬಿಲ್ ಮೇಲೆ ಪ್ರೆಸಿಡೆಂಟ್ ರವರ ಸಹಿ ಇರುವುದಿಲ್ಲ ಮತ್ತು ಎಮ್.ಬಿ. ಪುಸ್ತಕದಲ್ಲಿ ಎ.ಇ.ಇ., ರವರ ಚೆಕ್ ಮೆಷರ್‌ಮೆಂಟ್ ಇರುವುದಿಲ್ಲ ಎಂದರೆ, ಸದರಿ ಕಾಮಗಾರಿಯು ಶ್ರೀ ಕೇಶವಮೂರ್ತಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ರವರ ಅವಧಿಯಲ್ಲಿ ಆಗಿರುತ್ತದೆ ".

**" ನಾನು 3 ಕೆರೋಸಿನ್ ಮೋಟಾರುಗಳು ಹಣ ಸಂದಾಯ ಮಾಡಿದ ಕ್ಯಾಶ್ ರಿಸಿಪ್ಟ್ ಗಳಲ್ಲಿ, ಲಕ್ಷ್ಮೀ ವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ರವರ ಕೆ.ಎಸ್.ಟಿ., ನಂಬರ್ ಇರಲಿಲ್ಲ ಎಂದರೆ, ಸರಿ ".**

**" ಲಕ್ಷ್ಮೀ ವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ರವರ ಕೊಟೇಷನ್ ಮೇಲೆ ಅಥೊರೈಸ್ಡ್ ಡೀಲರ್ ರವರ ಸಹಿ ಇರಲಿಲ್ಲ ಎಂದರೆ, ಸರಿಯಲ್ಲ".**

19. ದೂರುದಾರರ ದೂರು, ಪಿ.ಡಬ್ಲ್ಯೂ–1 ರವರ ಸಾಕ್ಷ್ಯ ನಿ.ಪಿ–1 ರಿಂದ 6 ರ ದಾಖಲಾತಿಗಳು ಹಾಗೂ ಡಿ.ಡಬ್ಲ್ಯೂ–1 ರವರ ಸಾಕ್ಷ್ಯ ನಿ.ಡಿ–1 ರಿಂದ 15 ರ ದಾಖಲಾತಿ ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಿರುತ್ತೇನೆ.

(i) ಆಪಾದಿತ ಸರ್ಕಾರಿ ನೌಕರರು ದಿನಾಂಕ: 01–09–2006 ರಂದು 3 ಸೀಮೆಎಣ್ಣೆ ಮೋಟಾರುಗಳನ್ನು ಲಕ್ಷ್ಮೀ ವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ಅಂಡ್ ಹಾರ್ಡ್‌ವೇರ್ ರವರಿಂದ ರೂ.40,800/– ಗಳಿಗೆ ಕೋಟೆಷನ್ ಕರೆಯದೆ ಹಾಗೂ ಪರ್ಚೇಶ್ ಕಮಿಟಿಯವರ ಅನುಮೋದನೆ ಪಡೆಯದೆ ಹಾಗೂ ಸದರಿ ಹಣವನ್ನು ಸೆಲ್ಫ್ ಚೆಕ್ ಮೂಲಕ ಪಡೆದು, ಮೆ॥ ಲಕ್ಷ್ಮೀವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ಅಂಡ್ ಹಾರ್ಡ್‌ವೇರ್ ರವರಿಗೆ ನಗದು ರೂಪದಲ್ಲಿ ಸಂದಾಯ ಮಾಡಲು ತಮಗೆ ಅಧಿಕಾರವಿಲ್ಲದಿದ್ದರೂ ಸಂದಾಯ ಮಾಡಿ ಕರ್ತವ್ಯಲೋಪ ಎಸಗಿರುವುದಕ್ಕೆ ಸಂಬಂಧಿಸಿದಂತೆ,

ದೂರುದಾರರು ಸಲ್ಲಿಸಿರುವ ನಿ.ಪಿ–4 ಕೆ.ಆರ್. ಪೇಟೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ರವರಿಗೆ ಪತ್ರ ಹಾಗೂ ಆಲಂಬಾಡಿ ಕಾವಲ್ ಗ್ರಾಮ ಪಂಚಾಯತಿ ಕಛೇರಿಯ ಪರವೀಕ್ಷಣಾ ವರದಿ ದಾಖಲೆಗಳನ್ನು ಪರಿಶೀಲಿಸಲಾಗಿ **ನಿ.ಪಿ–4 ರ 3ನೇ ಪುಟದಲ್ಲಿ,** ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕೃಷ್ಣರಾಜಪೇಟೆ ತಾಲ್ಲೂಕು, ಮಂಡ್ಯಜಿಲ್ಲೆ ರವರು ದೂರುದಾರರು ಸಲ್ಲಿಸಿದ ದೂರಿನ ಬಗ್ಗೆ ಸದರಿ ಗ್ರಾಮ ಪಂಚಾಯತಿ ಭೇಟಿ ನೀಡಿ ಸತ್ಯಾಸತ್ಯತೆಯನ್ನು ಪರಿಶೀಲಿಸಿ ವರದಿ ನೀಡಿದ್ದು, **2006–07 ನೇ ಸಾಲಿನ ಅಭಿವೃದ್ಧಿ ಅನುದಾನದ ಕ್ರಿಯಾಯೋಜನೆಯ ಶೇಕಡ 20 ರ ಫಲಾನುಭವಿಗಳಿಗೆ ವಿತರಿಸಲು ಶ್ರೀ ಲಕ್ಷ್ಮೀ**

**ವೆಂಕಟೇಶ್ವರ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ ಕೆ.ಆರ್. ಪೇಟೆ ಬಿಲ್ ನಂ.--- ಇಲ್ಲ---- ದಿನಾಂಕ 01.09.2006 ರೂ. 40,800 (13,600X3) ರಲ್ಲಿ ಖರೀದಿಸಲಾಗಿದೆ. 3 ಸಂಸ್ಥೆಯಿಂದ ಕೋಟೇಷನ್‌ಗಳನ್ನು ಪಡೆದಿದ್ದರೂ ಅವುಗಳನ್ನು ಖರೀದಿ ಸಮಿತಿಯಲ್ಲಿಟ್ಟು ಅನುಮೋದನೆ ಪಡೆದುಕೊಂಡಿಲ್ಲ, ಖರೀದಿಸಿರುವ ಸಂಸ್ಥೆಯ ವ್ಯಾಟ್ ನೋಂದಣಿ ಪತ್ರ ಪಡೆದುಕೊಂಡಿಲ್ಲ. ಸ್ಟಾಕ್ ತೆಗೆದುಕೊಂಡು ವಿತರಿಸಿದ ಬಗ್ಗೆ ದಾಖಲೆಗಳಿಲ್ಲ ಹಾಗೂ ಕಛೇರಿಯಲ್ಲಿ ಭೌತಿಕ ದಾಸ್ತಾನಿನಲ್ಲೂ ಇರಲಿಲ್ಲ ಹಾಗೂ ಫಲಾನುಭವಿಯಿಂದ ಆರ್.ಟಿ.ಸಿ. ದಾಖಲೆ ಪಡೆದುಕೊಂಡಿಲ್ಲ. ಮಂಜೂರಾತಿ ವಿತರಣೆ ಬಗ್ಗೆ ನಿಯಮಾನುಸಾರ ಕ್ರಮಕೈಗೊಂಡಿಲ್ಲ. ಸರಬರಾಜುದಾರರಿಗೆ ಸೆಲ್ಫ್ ಚೆಕ್‌ನಲ್ಲಿ ಹಣ ಡ್ರಾ ಮಾಡಿ ನಗದು ಪಾವತಿ ಮಾಡಿದೆ. ಇದು ಅಕ್ರಮವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.**

ಆಪಾದಿತ ಸರ್ಕಾರಿ ನೌಕರ/ಡಿಡಬ್ಲ್ಯೂ-1 ರವರನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಪಾಟೀ ಸವಾಲು ಮಾಡಲಾಗಿ ಈ ಕೆಳಕಂಡಂತೆ ಒಪ್ಪಿಕೊಂಡಿರುತ್ತಾರೆ ಆಪಾದಿತ ಸರ್ಕಾರಿ ನೌಕರರು 3 ಸೀಮೆಎಣ್ಣೆ ಮೋಟಾರುಗಳನ್ನು ಖರೀದಿಸಿದ ಬಾಬ್ತು ರೂ.40,800/- ಹಣವನ್ನು ಸೆಲ್ಫ್ ಚೆಕ್ ಮೂಲಕ ಪಡೆದು, ನಗದು ಹಣವನ್ನು ಮೆ॥ ಲಕ್ಷ್ಮೀವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ಅಂಡ್ ಹಾರ್ಡ್‌ವೇರ್ ರವರಿಗೆ ಸಂದಾಯ ಮಾಡಿರುವುದಾಗಿ ಸದರಿ ಹಣವನ್ನು ಸೆಲ್ಫ್ ಚೆಕ್ ಮೂಲಕ ಪಡೆದು, ಮೆ॥ ಲಕ್ಷ್ಮೀವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ಅಂಡ್ ಹಾರ್ಡ್‌ವೇರ್ ರವರಿಗೆ ನಗದು ರೂಪದಲ್ಲಿ ಸಂದಾಯ ಮಾಡಲು ನನಗೆ ಅಧಿಕಾರ ಇರಲಿಲ್ಲ ಎಂದರೆ, **ಅಧ್ಯಕ್ಷರ ಒತ್ತಡಕ್ಕೆ ಹಾಗೂ ಕೆಲಸದ ಒತ್ತಡದಿಂದ ಲೋಪ ಆಗಿರುತ್ತದೆಂದು ಒಪ್ಪಿಕೊಂಡಿರುತ್ತಾರೆ.** ಹಣ ಸಂದಾಯ ಮಾಡಿದ ಕ್ಯಾಶ್ ರಿಸಿಪ್ಟ್‌ಗಳಲ್ಲಿ ಲಕ್ಷ್ಮೀ ವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ರವರ **ಕೆ.ಎಸ್.ಟಿ. ನಂಬರ್ ಇರಲಿಲ್ಲವೆಂದು** ಒಪ್ಪಿಕೊಂಡಿರುತ್ತಾರೆ. ಆದ್ದರಿಂದ, ಆಪಾದಿತ ಸರ್ಕಾರಿ ನೌಕರರು ದಿನಾಂಕ: 01-09-2006 ರಂದು 3 ಸೀಮೆಎಣ್ಣೆ ಮೋಟಾರುಗಳನ್ನು ಲಕ್ಷ್ಮೀ ವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ಅಂಡ್ ಹಾರ್ಡ್‌ವೇರ್ ರವರಿಂದ ರೂ.40,800/- ಗಳಿಗೆ ಕೋಟೇಷನ್ ಕರೆದಿದ್ದರೂ ಸಹ ಪರ್ಚೇಸ್ ಕಮಿಟಿಯವರ ಅನುಮೋದನೆ ಪಡೆಯದೆ ಹಾಗೂ ತಮಗೆ ಅಧಿಕಾರವಿಲ್ಲದಿದ್ದರೂ ಸಹ ಸದರಿ ಹಣವನ್ನು ಸೆಲ್ಫ್ ಚೆಕ್ ಮೂಲಕ ಪಡೆದು, ಮೆ॥

ಲಕ್ಷ್ಮೀವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ಅಂಡ್ ಹಾರ್ಡ್‌ವೇರ್ ರವರಿಗೆ ನಗದು ರೂಪದಲ್ಲಿ ಸಂದಾಯ ಮಾಡಿ ಕರ್ತವ್ಯಲೋಪ ಎಸಗಿರುವುದನ್ನು **ಶಿಸ್ತುಪ್ರಾಧಿಕಾರವು ಸಾಭೀತುಪಡಿಸುವಲ್ಲಿ ಸಫಲವಾಗಿರುತ್ತದೆ.**

ಇನ್ನೂ

**(ii)ನೇ ಆಪಾದನೆಗೆ ಸಂಬಂಧಿಸಿದಂತೆ,** ಶ್ರೀಮತಿ ಪೂರ್ಣಿಮ ಕೋಂ ವಿಷಕಂಠಮೂರ್ತಿರವರ ಜಮೀನು ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಅದಕ್ಕೆ ಸಂಬಂಧಪಟ್ಟಂತೆ ಎ.ಎಸ್. ರಮೇಶ್ ಎಂಬ ಕಂಟ್ರಾಕ್ಟ್‌ರವರಿಗೆ ಗುತ್ತಿಗೆ ನೀಡಿ ಅಭಿವೃದ್ಧಿ ಕಾಮಗಾರಿಯನ್ನು ನಡೆಸಿ ಕಾಮಗಾರಿ ಮಾಡಿರುವ ಅಳತೆಯನ್ನು ಎ.ಆರ್. ವೆಂಕಟೇಶ್, ಜೂನಿಯರ್ ಇಂಜಿನಿಯರ್ ಪಿ.ಆರ್.ಇ ಸಬ್ ಡಿವಿಜನ್, ಕೆ.ಆರ್. ಪೇಟೆ ರವರು ಮಾಡಿ ಅದಕ್ಕೆ ಸಂಬಂಧಪಟ್ಟಂತೆ ಸದರಿಯವರು ವರದಿ ನೀಡಿ ವರದಿಯ ಮೇರೆಗೆ ಕಾಮಗಾರಿ ಮೊತ್ತ ರೂ. 15,415/– ಗಳನ್ನು ನಿಗದಿಪಡಿಸಿ ನೀಡಿದ್ದು, ಅದಕ್ಕೆ ಸಂಬಂಧಪಟ್ಟಂತೆ ಪಹಣಿ, ವಂಶವೃಕ್ಷ, ಗುತ್ತಿಗೆ ಪ್ರಮಾಣ ಪತ್ರ ಮತ್ತು ಅಳತೆ ಪುಸ್ತಕದ ಪ್ರತಿಗಳನ್ನು ಹಾಜರ್‌ಪಡಿಸಿದ್ದು, ಅಧ್ಯಕ್ಷರ ಸಹಿ ಇರುವುದಿಲ್ಲ ಮತ್ತು ಎಂ.ಬಿಯಲ್ಲಿ ಎ.ಇ.ಇ. ರವರ ಚೆಕ್ ಮೆಜರ್‌ಮೆಂಟ್ ಇರವುದಿಲ್ಲ.

ಡಿ.ಡಬ್ಲ್ಯೂ–1/ಆಪಾದಿತ ಸರ್ಕಾರಿ ನೌಕರ ರವರು ತಮ್ಮ ಸಾಕ್ಷ್ಯದಲ್ಲಿ, ಸದರಿ ಕಾಮಗಾರಿಯು ಶ್ರೀ ಹೆಚ್. ಕೇಶವಮೂರ್ತಿ, ಹಿಂದಿನ ಕಾರ್ಯದರ್ಶಿ ರವರು ದಿನಾಂಕ 05/10/2006 ರಿಂದ ಕರ್ತವ್ಯ ನಿರ್ವಹಿಸಿದ್ದು ಅವರ ಅವಧಿಗೆ ಸಂಬಂಧಿಸಿದ್ದಾಗಿ ಹಾಗೂ ಕಾಮಗಾರಿಯು ಅವರ ಅವಧಿಯಲ್ಲಿ ಆಗಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ ಶ್ರೀ ಕೇಶವಮೂರ್ತಿಯವರು ದಿನಾಂಕ 04.01.2012 ರಂದು ಮೃತಪಟ್ಟಿರುತ್ತಾರೆ.

**ಮೇಲ್ಕಂಡ ಸಂದರ್ಭಗಳಲ್ಲಿ (ii)ನೇ ಆಪಾದನೆ ಶ್ರೀ ಕೇಶವಮೂರ್ತಿ, ಹಿಂದಿನ ಕಾರ್ಯದರ್ಶಿ, ಆಲಂಬಾಡಿ ಕವಲು ಗ್ರಾಮ ಪಂಚಾಯತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ರವರ ಅವಧಿಯಲ್ಲಿ ಕೈಗೊಂಡಿರುವುದರಿಂದ ಹಾಗೂ ಸದರಿಯವರು ಈಗಾಗಲೇ ಮೃತಪಟ್ಟಿರುವುದರಿಂದ, ಆಪಾದಿತ ಸರ್ಕಾರಿ ನೌಕರ ಶ್ರೀ ಕಾಂತರಾಜು, ಹಿಂದಿನ ಕಾರ್ಯದರ್ಶಿ ರವರಿಗೆ ಸಂಬಂಧಪಟ್ಟಿರುವುದಿಲ್ಲ.**

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವಿಚಾರಣಾ ವರದಿ ಸಲ್ಲಿಸಲಾಗಿದೆ.**

**: ವಿಚಾರಣಾ ವರದಿ :**

ಶಿಸ್ತು ಪ್ರಾಧಿಕಾರವು ಆಪಾದಿತ ಸರ್ಕಾರಿ ನೌಕರ **ಶ್ರೀ ಕಾಂತರಾಜು,** ಹಿಂದಿನ ಕಾರ್ಯದರ್ಶಿ, ಆಲಂಬಾಡಿ ಕವಲು ಗ್ರಾಮ ಪಂಚಾಯತಿ, ಕೆ.ಆರ್. ಪೇಟೆ ತಾಲ್ಲೂಕು ಮಂಡ್ಯ ಜಿಲ್ಲೆ ರವರ ವಿರುದ್ಧದ ದೋಷಾರೋಪಣೆಯಲ್ಲಿ ಮಾಡಲಾದ 1ನೇ ಆಪಾದನೆಯನ್ನು **ರುಜುವಾತು ಪಡಿಸುವಲ್ಲಿ ಸಫಲವಾಗಿದೆ** ಹಾಗೂ ದೋಷಾರೋಪಣೆಯಲ್ಲಿ ಮಾಡಲಾದ 2ನೇ ಆಪಾದನೆಯು ಆಪಾದಿತ ಸರ್ಕಾರಿ ನೌಕರರಿಗೆ **ಸಂಬಂಧಿಸಿರುವುದಿಲ್ಲ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-II ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

28ನೇ ಏಪ್ರಿಲ್ 2022.

(ಜಿ. ನಂಜುಂಡಯ್ಯ)
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Sri. G.S. Karigowda (Complainant) (original) | |
| **LIST OF WITNESS EXAMINED ON BEHALF OF DEFENSE :** | |
| DW-1 : Sri. Kanthraju (DGO)-(original) | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex.P.1: | Complaint of the complainant dated 10/04/2007 (Original) |
| Ex.P.2 : | Form No. I (Complaint) dated 10/04/2007 (Original) |
| Ex.P.3 : | Form No. II (Affidavit) dated 03/04/2007 (Original) |
| Ex.P.4 : | Letter of Executive Officer, Taluk Panchayath, K.R. Pet addressed, CEO, ZP, Mandya dated 28/06/2006 and report (Xerox) |
| Ex.P.5 : | Rejoinder of complainant dated 30/08/2007 (original) |
| Ex.P.6: | Witness submitted document submitted along with rejoinder (torned) (Original) |
| **LIST OF EXHIBITS MARKED ON BEHALF OF DEFENSE:** | |
| Ex.D-1 & 2 : | Documents pertains to land development of Smt. Poornima estimation and contract certificate (Xerox) |
| Ex.D-3: | Letter of Secretary Alambadi Kavalu Grama Panchayath dated 05/10/2006 written letter to Executive Officer, Taluk Panchayath, K.R. Pet (Original 87 xerox 88) |

| | |
|---|---|
| Ex.D-4: | Charge List dated 05.10.2016 (xerox) |
| Ex.D-5 to 7 : | 3 quotations (Xerox) |
| Ex.D-8 & 9 | Copy of credit Bill and cash receipt (Xerox) |
| Ex.D-10 | Copy of resolution dated 10/08/2016 of Almbadi Kaval Gram Panchayath (Xerox) |
| Ex.D-11 | Copy of the inward book extract for having received 3 kerosene motor (Xerox) |
| Ex.D-12 | Copy of the Genealogical Tree of Smt. Poornima (Xerox) |
| Ex.D-13 | Copy of the contract certificate for having given contract of Sri. Parmesh for land development (Xerox) |
| Ex.D-14 | Copy of the estimate given by Junior Engineer (Xerox) |
| Ex.D-15 | Copy of MB Book extract (Xerox) |

DOR of DGO : **Already Retired** (31.08.2007).

**28th April 2022**

**( G. NANJUNDAIAH )**
Additional Registrar (Enquiries)-10
Karnataka Lokayukta,
Bengaluru.

KARNATAKA LOKAYUKTA

No.Uplok-2/DE/171/2019/ARE-10

Multi-storeyed Building,
Dr.B.R. AmbedkarVeedhi,
Bengaluru, dt.13.5.2022.

## RECOMMENDATION

Sub:- Departmental inquiry against Sri. Kantharaju, The then Secretary, Alambadi Kavalu Grama Panchayath, K.R.Pet Taluk, Mandya District-reg.

Ref:- 1) Government Order No. ಗ್ರಾಅಪ/251/ಗ್ರಾಪಂಕಾ/2019, Bengaluru Dated: 11.6.2019.
2) Nomination order No. Uplok-2/DE/171/2019/ Bengaluru dated: 20.06.2019 of Upalokayukta, State of Karnataka.
3) Inquiry report dated 28.4.2022 of Additional Registrar of Enquiries-10, Karnataka Lokayukta, Bengaluru.

~~~~~

The Government by its order dated 11.6.2019 initiated disciplinary proceedings against Sri Kantharaju, the then Secretary, Alambadi Kavalu Grama Panchayath, K.R.Pet Taluk, Mandya District [hereinafter referred to as Delinquent Government Official, for short as 'DGO'] and entrusted the departmental inquiry to this Institution.

2. This Institution by Nomination Order No. Uplok-2/DE/171/2019/ Bengaluru dated: 20.06.2019 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to
~~~~~

conduct departmental inquiry against DGO for the alleged charge of misconduct, said to have been committed by him.

3. The DGO - Sri. Kantharaju, the then Secretary, Alambadi Kavalu Grama Panchayath, K.R.Pet Taluk, Mandya District was tried for the following charges:-

**ANNEXURE-1**

**CHARGE**

"That, you **Sri Kantharaju,** the then Secretary, Alambadi Kavalu Village, K.R. Pet Taluk, Mandya District, has committed following dereliction of duty/misconduct:-

(i) "You DGO on 1/9/2006, three motors were purchased from Sri Lakshmi Venkatshwara Electricals and Hardwares for a sum of Rs.40,800/-, without approval of quotations from purchase committee. The motors were not taken to stock. The amount was drawn through self cheque and cash was paid to M/s. Sri Lakshmi Venkatshwara Electricals and Hardwares."

(ii) "The work was taken up for leveling land of Poornima W/o Vishakanta Murthy, under the scheme of development for Rs.15,415/-, an

estimate was prepared for Rs.15,415/- and one AS Paramesha, the contractor had taken up the work. The contract certificate produced by you does not bear the date and the payment bill does not bear the signature of President of the Gram Panchayath. The MB produced does not find the check measurement by AEE"

Thus, you DGO being Government/public servant has failed to maintain absolute integrity besides devotion to duty and acted in a manner unbecoming of Government servant and thus committed misconduct as enumerated U/R 3(1) of Karnataka Civil Service (Conduct) Rules 1966".

4. On perusal of the record, in order to prove the delinquency of the DGO, the Disciplinary Authority has examined one witness as PW1, Sri. G.S. Karigowda and got marked Ex.P1 to P6. The DGO was also examined himself as DW1 and got marked Ex.D1 to D15.

5. On perusal of the entire records, there is no allegation that the DGO has misused or misappropriated any amount. He has admitted, that he has done that mistake due to the pressure of the President. Whatever may be the pressure, the DGO would not have done the above said alleged act without following proper procedure contemplated. Therefore,

the Enquiry Officer's report is proper on the basis of the materials available on record.

6. The Inquiry Officer (Additional Registrar of Enquiries-10) on proper appreciation of oral and documentary evidence has held that, 'the Disciplinary Authority has ' proved' the charge No. 1 and charge No.2, levelled against the DGO is not related to 'Sri. Kantharaju, The then Secretary, Alambadi Kavalu Grama Panchayath, K.R.Pet Taluk, Mandya District.

7. On perusal of the records and enquiry report, the Disciplinary Authority has examined PW1 and got marked documents Ex.P1 to P6. The DGO was also examined as DW1 and Ex.D1 to D15 documents are got marked.

8. On re-consideration of report of inquiry, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

9. As per the First Oral Statement of DGO furnished by the Inquiry Officer, DGO – Sri. Kantharaju, was retired from service on 31.08.2007.

10. Having regard to the nature of charge 'proved' against DGO – 'Sri. Kantharaju, the then Secretary, Alambadi Kavalu Grama Panchayath, K.R.Pet Taluk, Mandya District' and on consideration of the totality of circumstances-,

'it is hereby recommended to the Government to impose penalty of 'with holding 10% of the pension payable to the DGO Sri. Kantharaju for two year'.

11. Action taken in the matter shall be intimated to this Authority.

Connected records are enclosed herewith.

K.N. Phaneendra 13/05/22

**(JUSTICE K.N.PHANEENDRA)**
Upalokayukta-2,
State of Karnataka.